ಟ್ರಂಗ್ ಚೀ ಎಲ್ಲೋ ಕಣ್ಮರೆಯಾದ. ಒಂದು ದಿನ ಅದೇ ಹಳ್ಳಿಯ ಒಬ್ಬ ಮುದುಕಿ ಅವನ ಪಾಳು ಬಿದ್ದ ಗುಡಿಸಿಲಿನೊಳಗೆ ಇಣುಕಿದಳು. ಅಲ್ಲೊಂದು ಸುಂದರವಾದ ಬಟ್ಟಲಿತ್ತು. ಅದೇ ಅವನ ಏಕೈಕ ಆಸ್ತಿ. ಮುದುಕಿ ಚೆಲುವೆಗೆ ಆ ಬಟ್ಟಲನ್ನು ತಲುಪಿಸಿದಳು. ಚೆಲುವೆ ಬಟ್ಟಲನ್ನು ತನ್ನ ತುಟಿಗಳಿಗೆ ತಾಗಿಸಿ ತಣ್ಣನೆಯ ತಿಳಿನೀರನ್ನು ಸವಿದಳು. ಅನಾಮತ್ತಾಗಿ ಅವಳಿಗೆ ತಾನೇನು ಕನಸು ಕಾಣುತ್ತಿರುವನೇ ಎಂದು ಅನಿಸತೊಡಗಿತು. ಪುನಃ ಆತನ ಮಧುರ ಕೊಳಲ ಗಾನದಿಂದ ಹೃದಯ ತುಂಬಿತ್ತು. ಅವನು ತನ್ನ ಹತ್ತಿರವೇ ಇದ್ದಾನೆಂದು ಆಕೆಗೆ ಭಾಸವಾಯಿತು. ಹಠಾತ್ತನೆ ಬಟ್ಟಲು ಕೈ ಜಾರಿ ನೆಲಕ್ಕೆ ಬಿತ್ತು. ನಾದ ಸ್ತಬ್ಧವಾಯಿತು... ಹಕ್ಕಿಯೊಂದು ರೆಕ್ಕೆ ಬಿಚ್ಚಿ ಕಿಟಕಿಯಾಚೆ ಹಾರಿತು; ನದಿಯ ಮೇಲೆ ಗಾಳಿಯಲ್ಲಿ ತೇಲುತ್ತಾ ಮಾಯವಾಯಿತು. ಕೊನೆಗೂ ಟ್ರಂಗ್ ಚೀ ಚೆಲುವೆಯ ಹೃದಯ ಗೆದ್ದಿದ್ದ. ಅವನ ಆತ್ಮ ತೃಪ್ತಿಯಿಂದ ಸ್ವತಂತ್ರವಾಯಿತು. ಚೆಲುವೆ ತನ್ನ ಜೀವನದುದ್ದಕ್ಕೂ ಯಾರನ್ನೂ ವರಿಸದೆ ಹುಟ್ಟು ಹಾಕುವವನ ಬೆಚ್ಚನೆಯ ಪ್ರೀತಿ ಮತ್ತು ಕಾಡುವ ಕೊಳಲಗಾನದ ನೆನಪಲ್ಲೇ ಇದ್ದಳು.

(ವಿಯೆಟ್ನಾಮ್ ಜನಪದ ಕತೆ)

